# ಸೇತುಬಂಧ

# 2018

## ಪ್ರಥಮ ಭಾಷೆ – ಸಿರಿ ಕನ್ನಡ

9 ಮತ್ತು 10 ನೇ ತರಗತಿ


ಸಂಪನ್ಮೂಲ ರಚನೆ

ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ,ರೂಪನಗುಡಿ
ಬಳ್ಳಾರಿ ಪೂರ್ವ ವಲಯ


**ವಿಷಯಗಳು**


1) 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಸಾಮರ್ಥ್ಯಗಳು
2) 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಸಾಮರ್ಥ್ಯಗಳು
3) 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ನೈದಾನಿಕ ಪರೀಕ್ಷೆ ಪ್ರಶ್ನೆ ಪತ್ರಿಕೆ
4) 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಸಾಫಲ್ಯ ಪರೀಕ್ಷೆ ಪ್ರಶ್ನೆ ಪತ್ರಿಕೆ
5) 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ನೈದಾನಿಕ ಪರೀಕ್ಷೆ ಪ್ರಶ್ನೆ ಪತ್ರಿಕೆ
6) 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಸಾಫಲ್ಯ ಪರೀಕ್ಷೆ ಪ್ರಶ್ನೆ ಪತ್ರಿಕೆ
7) ನೈದಾನಿಕ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆ ದಾಖಲೆ ವಹಿ



*Use e-papers, Save Trees*
**Above line hide when print ourt-InyaTrust.com**

## 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ
## ಸಾಮರ್ಥ್ಯಗಳು

1. ಸಂಯುಕ್ತಾಕ್ಷರಗಳು ಮತ್ತು ಪರಿಚಿತ ಪದಗಳ ಉಕ್ತಲೇಖನ ತೆಗೆದುಕೊಳ್ಳುವುದು.

2. ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು.

3. ಪದ್ಯಗಳನ್ನು ಓದಿ ಅವುಗಳ ಸಾರಾಂಶಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು

4. ಸರಳ ವ್ಯಾಕರಣಾಂಶಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು.

---

## 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ
## ಸಾಮರ್ಥ್ಯಗಳು

1. ಸಂಯುಕ್ತಾಕ್ಷರಗಳು, ಲೇಖನ ಚಿಹ್ನೆಗಳನ್ನು ಒಳಗೊಂಡಂತೆ ಪರಿಚಿತ ಮತ್ತು ಅಪರಿಚಿತ ಪದಗಳ ಉಕ್ತಲೇಖನ ತೆಗೆದು ಕೊಳ್ಳುವುದು.

2. ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯದ ಪ್ರಕಾರಗಳನ್ನು ಓದಿ, ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು.

3. ಹಳಗನ್ನಡ ಪದ್ಯಗಳನ್ನು ಓದಿ ಅವುಗಳ ಸಾರಾಂಶವನ್ನು ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು.

4. ಸರಳವ್ಯಾಕರಣಾಂಶಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು


*Use e-papers, Save Trees*
**Above line hide when print ourt-InyaTrust.com**

## 10 ನೇ ತರಗತಿ ಸಿರಿ ಕನ್ನಡ – ನೈದಾನಿಕ ಪರೀಕ್ಷೆ – 2018

| ವಿದ್ಯಾರ್ಥಿ ಹೆಸರು | | ಹಾಜರಾತಿ ಸಂಖ್ಯೆ | |
|---|---|---|---|

**ಅ. ಶಿಕ್ಷಕರು ಹೇಳುವ ವಾಕ್ಯಗಳನ್ನು ಬರೆಯಿರಿ (ಉಕ್ತಲೇಖನ)**

CI.

**(ಪೂರ್ಣ ಸರಿ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉಕ್ತಲೇಖನ | ಶ್ರೇಣಿ |
|---|---|---|
| 1 | | |
| 2 | | |
| 3 | | |
| 4 | | |
| 5 | | |

**ಆ. ಕೆಳಗಿನ ಗದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ**

ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ವೀರನೃತ್ಯ. ಸಾಮೂಹಿಕ ನೃತ್ಯವನ್ನೊಳಗೊಂಡ ಕರ್ನಾಟಕದ ಜನಪದ ಕಲೆ. ಇಬ್ಬರಿಂದ ಮೂವತ್ತು ಮಂದಿ ಭಾಗವಹಿಸುತ್ತಾರೆ. ಪಂಚವಾದ್ಯಗಳಾದ ತಾಳ, ಶ್ರುತಿ, ಚಮಾಳ, ಓಲಗ, ಕರಡೆ ಬಳಕೆಯಾಗುತ್ತವೆ. ಕರಡೆಯು ಕುಣಿತದಲ್ಲಿ ಅನಿವಾರ್ಯ ವಾದ್ಯ ಎನಿಸಿದೆ. ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತವೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ ,ಬಿಚ್ಚುಗತ್ತಿ ,ಕಾಲ್ಗೆಜ್ಜೆ ಧರಿಸುತ್ತಾರೆ.

ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ. ವೀರಗಾಸೆ ಸಾಮೂಹಿಕ ನೃತ್ಯ. ವೀರಭದ್ರ ಕುಣಿತಕ್ಕೆ ದಕ್ಷಿಣಕರ್ನಾಟಕ ಪ್ರದೇಶದಲ್ಲಿ ಲಿಂಗಬೀರ, ಲಿಂಗಧೀರ, ಲಿಂಗವೀರ ಕುಣಿತವೆಂದು ಹೆಸರಿದೆ. ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದು ಜನಪ್ರಿಯವಾಗಿದೆ. ವೀರಶೈವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ವೀರಭದ್ರ ವೇµಧಾರಿ ದಕ್ಷಯಾಗ, ವೀರಭದ್ರನ ಜನನ ಮತ್ತು ವೀರಭದ್ರನ ವಿಜಯ ಮುಂತಾದ ಒಡಪುಗಳನ್ನು ಹೇಳುತ್ತಾನೆ. ಇದಕ್ಕೆ 'ಖಡ್ಗ' ಎಂದು ಕರೆಯುತ್ತಾರೆ. ಉತ್ತರಕರ್ನಾಟಕದಲ್ಲಿ 'ಒಡಪು' ಎನ್ನುವರು. ಮತ್ತೊಬ್ಬ ವ್ಯಕ್ತಿ "ಭಲರೇ ವೀರ, ಅಹಹಾ ವೀರ" ಎಂದು ಕಾಕು ಹೇಳುತ್ತ ಜಾಗಟೆ ಬಡಿಯುತ್ತ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ.

**ಪ್ರಶ್ನೆಗಳು :**

6. ವೀರಭದ್ರನ ಕುಣಿತವನ್ನು ಯಾವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿದ್ದಾರೆ ?
7. ವೀರಗಾಸೆ ಕುಣಿತದವರ ವೇಷಭೂಷಣ ಹೇಗಿರುತ್ತವೆ ?
8. ವೀರಗಾಸೆಯಲ್ಲಿ ಬಳಸುವ ಪಂಚವಾದ್ಯಗಳನ್ನು ಹೆಸರಿಸಿ ?



Use e-papers, Save Trees
Above line hide when print ourt-InyaTrust.com

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 6 | | |
| 7 | | |
| 8 | | |

**ಇ. ಕೆಳಗಿನ ಪದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಬಿನ್ನಹ ಗುರುವೆ ಧ್ಯಾನಕೆ ಬೇಸರಾದಾಗ
ನಿನ್ನನಾದಿಯ ಮಾಡಿಕೊಂಡು
ಕನ್ನಡದೊಳಗೊಂದು ಕಥೆಯ ಪೇಳುವೆನದು
ನಿನ್ನಾಜ್ಞೆ ಕಂಡ ನನ್ನೊಡೆಯಾ

ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
ರಯ್ಯಾ ಮಂಚಿದಿಯೆನೆ ತೆಲುಗ
ಅಯ್ಯಯ್ಯ ಎಂಚಪೊರ್ಲಾಂಡೆಂದು ತುಳುವರು
ಮೈಯುಬ್ಬಿ ಕೇಳಬೇಕಣ್ಣ

**ಪ್ರಶ್ನೆಗಳು**

9) ರತ್ನಾಕರ ವರ್ಣಿಯ ಕಥೆಯನ್ನು ತುಳುವರು ಹೇಗೆ ಮೈಯುಬ್ಬಿ ಕೇಳಬೇಕು ?

10) ರತ್ನಾಕರ ವರ್ಣಿ ಯಾವಾಗ ಕಥೆ ಬರೆಯುವುದಾಗಿ ಹೇಳುತ್ತಾನೆ ?

11) ರತ್ನಾಕರ ವರ್ಣಿ ಯಾರನ್ನು ಆದಿ ಮಾಡಿಕೊಂಡು ಕಥೆ ಹೇಳುತ್ತಾನೆ ?

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 9 | | |
| 10 | | |
| 11 | | |



*Use e-papers, Save Trees*
**Above line hide when print ourt-InyaTrust.com**

**ಈ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

12) ಕನ್ನಡ ವರ್ಣಮಾಲೆಯ ಅನುನಾಸಿಕಾಕ್ಷರಗಳನ್ನು ಬರೆಯಿರಿ

13) ಸಕಳಾಚಾರ್ಯ – ಈ ಪದವನ್ನು ಬಿಡಿಸಿ ಸಂಧಿ ಹೆಸರು ಬರೆಯಿರಿ

14) ಓದುವವನು – ಈ ಪದದ ಬಹುವಚನ ರೂಪ ಬರೆಯಿರಿ

15) ಕರುಣೆ – ಪದದ ವಿರುದ್ಧಾರ್ಥಕ ಪದ ಬರೆಯಿರಿ ?

16) ಅಶ್ವತ್ಥಾಮ, ರಾಮ, ಕುರುಡ – ಇವುಗಳಲ್ಲಿ ಅನ್ವರ್ಥನಾಮ ಪದ ಬರೆಯಿರಿ.

17) ಬಾನು : ಆಕಾಶ :: ಭಾನು : ___________

18) ಷಟ್ಪದಿ ಛಂಧಸ್ಸಿನಲ್ಲಿ ಎಷ್ಟು ಸಾಲುಗಳಿರುತ್ತವೆ ?

19) **ಸಿಸಿರಮನೆ ಪಡೆದು ಪರಕೆಗೆ ವಸಂತನಲವ್ರೋದ ಮಾವಿನಡಿಮಂಚಿಕೆಯೊಳ್** – ಈ ವಾಕ್ಯಕ್ಕೆ ಪ್ರಸ್ತಾರ ಹಾಕಿರಿ

20) ಸೀತೆಯ ಮುಖ ಕಮಲದಂತೆ ಅರಳಿತು – ಇದರ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ.

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 12 | | |
| 13 | | |
| 14 | | |
| 15 | | |
| 16 | | |
| 17 | | |
| 18 | | |
| 19 | **ಸಿಸಿರಮನೆ ಪಡೆದು ಪರಕೆಗೆ ವಸಂತನಲವ್ರೋದ ಮಾವಿನಡಿಮಂಚಿಕೆಯೊಳ್** | |
| 20 | **ಸೀತೆಯ ಮುಖ ಕಮಲದಂತೆ ಅರಳಿತು** | |



*Use e-papers, Save Trees*
**Above line hide when print ourt-InyaTrust.com**

## 10 ನೇ ತರಗತಿ ಸಿರಿ ಕನ್ನಡ – ಸಾಫಲ್ಯ ಪರೀಕ್ಷೆ – 2018

| ವಿದ್ಯಾರ್ಥಿ ಹೆಸರು | | ಹಾಜರಾತಿ ಸಂಖ್ಯೆ | |
|---|---|---|---|

**ಅ. ಶಿಕ್ಷಕರು ಹೇಳುವ ವಾಕ್ಯಗಳನ್ನು ಬರೆಯಿರಿ (ಉಕ್ತಲೇಖನ)**

**(ಪೂರ್ಣ ಸರಿ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉಕ್ತಲೇಖನ | ಶ್ರೇಣಿ |
|---|---|---|
| 1 | | |
| 2 | | |
| 3 | | |
| 4 | | |
| 5 | | |

**ಆ. ಕೆಳಗಿನ ಗದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಹೊಯ್ಸಳ ಸಾಮ್ರಾಜ್ಯದ ಪ್ರಗತಿಯನ್ನು ಕಂಡ ಪರರಾಜರ ಕಣ್ಣುಗಳು ಕಿಸುರಾದವು. ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನ ಭೂಪಾಲನನ್ನು ಬಡಿಯಬೇಕೆಂದು ಶತ್ರು ರಾಜರುಗಳನೇಕರು–ಹವಣಿಸುತ್ತಿದ್ದರು. ಅವರಲ್ಲಿ ಚೋಳಮಂಡಲದ ಕುಲೋತ್ತುಂಗ ಪ್ರಮುಖನಾದವನು. ಗಂಗರ ತಲಕಾಡು ಅವನ ಸ್ವಾಧೀನದಲ್ಲಿತ್ತು. ಅಲ್ಲಿ ಆದಿಯಮ ಎಂಬುವನನ್ನು ರಾಜಪ್ರತಿನಿಧಿಯಾಗಿ ನೇಮಿಸಿದ್ದನು. ಕುಲೋತ್ತುಂಗ ಪ್ರಚಂಡ ಆಶಾವಾದಿ. ಅಖಂಡ ಭರತಖಂಡದ ಒಡೆತನವನ್ನು ಬಯಸುತ್ತಿದ್ದ ದುರಾಶಾಪಿಶಾಚಿ. ಗಂಗ ಸಾಮ್ರಾಜ್ಯವನ್ನು ತನ್ನ ವಶ ಮಾಡಿಕೊಳ್ಳಲೆಂದು ಆಶಿಸಿ, ಆದಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಕಳುಹಿಸಿದ. ಆದಿಯಮ ಮೊದಮೊದಲು ಗಡಿನಾಡುಗಳಲ್ಲಿ ಚಿಕ್ಕ ಪುಟ್ಟ ದಾಳಿಗಳನ್ನು ನಡೆಸುತ್ತಿದ್ದವನು ಒಂದು ದೊಡ್ಡ ದಂಡ–ಯಾತ್ರೆಯನ್ನು ಕೈಗೊಂಡ. ಇದನ್ನು ಗುಪ್ತಚಾರರಿಂದ ತಿಳಿದ ಹೊಯ್ಸಳೇಶ್ವರನು ಸಕಲ ಸೇನಾ ಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾಗಲೇಬೇಕಾಯಿತು.

ಶಕವರ್ಷ ಒಂದು ಸಾವಿರದ ಮೂವತ್ತೆಂಟನೆಯ ದುರ್ಮುಖಿನಾಮ ಸಂವತ್ಸರದ ಆಶ್ವಯುಜ ಶುದ್ಧ ದಶಮಿಯಂದು ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಜೈತ್ರಯಾತ್ರೆ ಹೊರಟಿತು. ಮಳವಳ್ಳಿ, ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು ಹೊಯ್ಸಳರ ಕೈ ಮೇಲಾಗಿ ಚೋಳಸೇನೆಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ದಿ ತಿಳಿಯುತ್ತಲೆ ಚೋಳಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡ ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈವಶವಾಯಿತು. ಸಮಸ್ತ ಸೇನೆಯು ತಲಕಾಡುಗೊಂಡನಿಗೆ ಜಯವಾಗಲಿ ಎಂದು ಜೈಕಾರ ಹಾಕಿತು.

**ಪ್ರಶ್ನೆಗಳು :**

6. ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಯಾವಾಗ ಜೈತ್ರಯಾತ್ರೆ ಹೊರಟಿತು ?
7. ಪರರಾಜರ ಕಣ್ಣುಗಳು ಯಾಕೆ ಕಿಸುರಾದವು ?
8. ಕುಲೋತ್ತುಂಗನು ಆದಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ದಾಳಿ ಮಾಡಲು ಏಕೆ ಕಳುಹಿಸಿದನು ?



Use e-papers, Save Trees
Above line hide when print ourt-InyaTrust.com

(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 6 | | |
| 7 | | |
| 8 | | |

**ಇ. ಕೆಳಗಿನ ಪದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡೊರೆ ಸಾಲದೇ ಸಂಸ್ಕೃತದಲಿನ್ನೇನು? — ಮಹಾಲಿಂಗರಂಗ

ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿಜನ್ಮಕಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿಬೇಡ –ಕಡಕೋಳ ಮಡಿವಾಳಪ್ಪ

**ಪ್ರಶ್ನೆಗಳು**

9) ನಮ್ಮ ಜನ್ಮಕ ಯಾರ ಸ್ನೇಹ ಬೇಡ ?

10) ಯಾರ ಸ್ನೇಹವನ್ನು ಮಾಡಿ ಕೆಡಬಾರದು ?

11) ಸುಲಿದ ಬಾಳೆಯ ಹಣ್ಣಿನಂತೆ , ಸಿಗುರು ತೆಗೆದ ಕಬ್ಬಿನಂತಿರುವ ಭಾಷೆ ಯಾವುದು ?

(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 9 | | |
| 10 | | |
| 11 | | |



Use e-papers, Save Trees
Above line hide when print ourt-InyaTrust.com

**ಈ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

12) ಕನ್ನಡ ವರ್ಣಮಾಲೆಯ ಹ್ರಸ್ವಸ್ವರಾಕ್ಷರಗಳನ್ನು ಬರೆಯಿರಿ

13) ಜಿನಾಲಯ – ಈ ಪದವನ್ನು ಬಿಡಿಸಿ ಸಂಧಿ ಹೆಸರಿಸಿ.

14) ಹೆಮ್ಮರ – ಪದವನ್ನು ವಿಗ್ರಹಿಸಿ ಸಮಾಸ ಹೆಸರಿಸಿ.

15) 'ಅಂಬಿಗ' ಎಂದರೆ ________________ (ರೈತ , ಗಾಡಿ ಹೊಡೆಯುವವ, ಗುರು, ದೋಣಿ ನಡೆಸುವವ)

16) ಅಶ್ವತ್ಥಾಮ, ಶಿಕ್ಷಕ, ಕುರುಡ – ಇವುಗಳಲ್ಲಿ ನಾಮಪದ ಆರಿಸಿ ಬರೆಯಿರಿ.

17) ಸುಖವು : ಪ್ರಥಮ ವಿಭಕ್ತಿ : : ಮನೆಗೆ : _____________

18) ಕಂದಪದ್ಯ ಛಂಧಸ್ಸಿನಲ್ಲಿ ಎಷ್ಟು ಸಾಲುಗಳಿರುತ್ತವೆ ?

19) **ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್** – ಈ ವಾಕ್ಯಕ್ಕೆ ಪ್ರಸ್ತಾರ ಹಾಕಿರಿ

20) **ಮಗುವಿನ ಮುಖ ಚಂದ್ರನಂತೆ ಬೆಳಗಿತು** – ಇದರ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ.

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 12 | | |
| 13 | | |
| 14 | | |
| 15 | | |
| 16 | | |
| 17 | | |
| 18 | | |
| 19 | **ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್** | |
| 20 | **ಮಗುವಿನ ಮುಖ ಚಂದ್ರನಂತೆ ಬೆಳಗಿತು** | |



*Use e-papers, Save Trees*
**Above line hide when print ourt-InyaTrust.com**

## ಶಾಲೆಯ ಹೆಸರು

## ನೈದಾನಿಕ ಮತ್ತು ಸಾಫಲ್ಯ ಪರೀಕ್ಷಾ ವಿವರ –2018 / 2019
## (ನಮೂನೆ–4ಬಿ)

**ವಿಷಯ :**

**ತರಗತಿ :**

| ಕ್ರ.ಸಂ | ವಿದ್ಯಾರ್ಥಿ ಹೆಸರು | ಪರೀಕ್ಷೆ | ಪ್ರಶ್ನೆಗಳ ಸಂಖ್ಯೆ ಮತ್ತು ಶ್ರೇಣಿ | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | ಫಲಿತಾಂಶ |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |
| | | ನೈದಾನಿಕ | | | | | | | | | | | | | | | | | | | | | |
| | | ಸಾಫಲ್ಯ | | | | | | | | | | | | | | | | | | | | | |



*Use e-papers, Save Trees*
**Above line hide when print ourt-InyaTrust.com**